**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 5**
**ಚಾ.ಸಾ.ಸಂಖ್ಯೆಃ 10**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ಶ್ರವಣಕುಮಾರ ಸೊಕನಾದಗಿ |
| ತಂದೆಯ ಹೆಸರುಃ | ಗೌಡಪ್ಪ |
| ವಯಸ್ಸುಃ | **26** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ದಾದನಟ್ಟಿ |

**ಸಾಕ್ಷಿಯನ್ನು ದಿಃ 25.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

**1.** ಚಾಸಾ-**1** ನನ್ನ ತಂದೆ. ಚಾಸಾ-**11** ನನ್ನ ಸಹೋದರ. ನನಗೆ ಆರೋಪಿತರ ಪರಿಚಯವಿದೆ. ಚಾಸಾ-**12** ರಿಂದ **15** ರವರ ಪರಿಚಯವಿದೆ. ಸುಮಾರು ಒಂದು ವರ್ಷದ ಹಿಂದೆ ನಾನು ಮೋಟಾರ್ ಸೈಕಲ ಮೇಲಿಂದ ಬಿದ್ದು ಗಾಯಗೊಂಡಿದ್ದೆ. ಆರೋಪಿತರು ನಮ್ಮ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿಲ್ಲ, ಹಲ್ಲೆ ಮಾಡಿಲ್ಲ. ಅವಾಚ್ಯ ಶಬ್ದಗಳಿಂದ ಬೈದಿಲ್ಲ. ನನಗೆ ಹಲ್ಲೆ ಮಾಡಿ ಗಾಯಪಡಿಸಿಲ್ಲ. ಈ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು. )

**ಪಾಟಿಸವಾಲುಃ ಸರ್ಕಾರಿ ಅಭಿಯೋಜಕರಿಂದಃ-**

**1.** ದಿ: **25.01.2023** ರಂದು ಆಗಿನ ಮಂತ್ರಿ ಗೋವಿಂದ ಕಾರಜೋಳ ಇವರ ಹುಟ್ಟುಹಬ್ಬದ ನಿಮಿತ್ಯ ನಾನು ಶುಭಾಶಯದ ಬ್ಯಾನರ ಹಾಕಿಸಿದ್ದೆ, ಅದನ್ನು ಆರೋಪಿತರು ತಮ್ಮ ಪೋಟೊಗಳನ್ನು ಬ್ಯಾನರನಲ್ಲಿ ಹಾಕಿಲ್ಲ ಅಂತ ಜಗಳ ತೆಗೆದು ಬ್ಯಾನರ ಕಿತ್ತು ಒಗೆದಿದ್ದರು ಎಂದರೆ ಸರಿಯಲ್ಲ. ದಿ: **30.01.2023** ರಂದು ರಾತ್ರಿ **9-30** ಗಂಟೆಗೆ ನಾನು ಹಾಗೂ ಚಾಸಾ-**12** ಕಿರಣ

**ಎಸ್.ಸಿ.ಸಂಖ್ಯೆಃ 10022/2025**
**ಪ್ರಾ.ಸಾ.ಸಂಖ್ಯೆಃ 5**
**ಚಾ.ಸಾ.ಸಂಖ್ಯೆಃ10**

ಮಲ್ಲಾಪೂರದ ನಮ್ಮ ಜಮೀನ ಸರ್ವೆ ನಂ. **13** ರಲ್ಲಿ ಟ್ರ್ಯಾಕ್ಟರನಿಂದ ಗಳೆ ಹೊಡೆಯಲು ಹೋಗಿದ್ದೆವು, ನಾವಿಬ್ಬರೇ ಹೋಗಿದ್ದೆವು ಅಂತ ಚಾಸಾ-**1** ಹಾಗೂ ಚಾಸಾ-**11** ಕೂಡ ಅಲ್ಲಿಗೆ ಬಂದಿದ್ದರು ಎಂದರೆ ಸರಿಯಲ್ಲ. ಆಗ ರಾತ್ರಿ **11-00** ಗಂಟೆ ಸಮಯದಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಕೂಡಿಕೊಂಡು ಕೈಯಲ್ಲಿ ಕೊಯ್ತಾ, ಬಡಿಗೆ, ಕಲ್ಲು, ಕಬ್ಬಿಣದ ರಾಡಗಳನ್ನು ಹಿಡಿದುಕೊಂಡು ಬಂದು ನನಗೆ ಬೊಸಡಿ ಮಗನೆ ಅಂತ ಬೈದರು, ನಂತರ ಕೊಲೆ ಮಾಡುವ ಉದ್ದೇಶದಿಂದ ಆರೋಪಿ ನಂ. **1** ತನ್ನ ಕೈಯಲ್ಲಿದ್ದ ಕೊಯ್ತಾದಿಂದ, **2**ನೇ ಆರೋಪಿ ರಾಡನಿಂದ, **3**ನೇ ಆರೋಪಿ ಬಡಿಗೆಯಿಂದ, **4**ನೇ ಆರೋಪಿ ಕಲ್ಲಿನಿಂದ, ನನಗೆ ಹೊಡೆದು ಗಾಯ ಪಡಿಸಿದರು ಎಂದರೆ ಸರಿಯಲ್ಲ. ಅದರಿಂದಾಗಿ ನನ್ನ ಎಡಗೈ ಬೆರಳುಗಳು ಮುರಿದವು, ತಲೆಗೆ ರಕ್ತ ಗಾಯ ಆಗಿತ್ತು ಎಂದರೆ ಸರಿಯಲ್ಲ.

**2.** ಆಗ ಚಾಸಾ-**1** , **11**, ಚಾಸಾ-**13** ಮತ್ತು **14** ರವರು ಸೇರಿ ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ನಂತರ ನನನ್ನು ಉಪಚಾರಕ್ಕಾಗಿ ಲೋಕಾಪೂರದ ಸಾಯಿ ಆಸ್ಪತ್ರೆಗೆ ದಾಖಲು ಮಾಡಿದರು, ನಂತರ ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಸೇರಿಸಿದರು ಎಂದರೆ ಸರಿಯಲ್ಲ. ಚಾಸಾ-**1** ಈ ಬಗ್ಗೆ ನಿಪಿ-**10** ರಂತೆ ಪಿರ್ಯಾದಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

**3.** ಈಗ ನೋಡುತ್ತಿರುವ ಮುಮಾ-**1** ರಿಂದ **6** ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಈಗ ಓದಿ ಹೇಳಲಾದ ರೀತಿಯಲ್ಲಿ ಅಂದರೆ " ಹೋದ ವಾರ ದಿನಾಂಕ: **25.01.2023……….** ಆಸ್ಪತ್ರೆಗೆ ಬಂದು ದಾಖಲು ಮಾಡಿದ್ದು ಇದೆ" ಅಂತ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. (ಸದರಿ ಹೇಳಿಕೆಯನ್ನು ನಿಪಿ-**16** ಅಂತ ಗುರುತಿಸಲಾಯಿತು).

**4.** ಆರೋಪಿತರಿಂದ ನಾನು ಹಲ್ಲೆಗೊಳಗಾಗಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ನಿಪಿ-**16** ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಮೋಟಾರ್ ಸೈಕಲನಿಂದ ಬಿದ್ದು ಗಾಯ ಹೊಂದಿದ್ದೇನೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಎಸ್.ಸಿ.ಸಂಖ್ಯೆಃ 10022/2025**
**ಪ್ರಾ.ಸಾ.ಸಂಖ್ಯೆಃ 5**
**ಚಾ.ಸಾ.ಸಂಖ್ಯೆಃ10**

**ಪಾಟಿಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**